<u>**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**</u>

<u>**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**</u>

**MVC** – 221/2024 **RW**–2

**ದಿಃ18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ಆರ ಆರ ಎನ ರವರಿಂದ.**

ನಾನು ಈ ಅರ್ಜಿಯಲ್ಲಿ 2 ನೇ ಎದುರುದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಧಿಕಾರ ಪತ್ರ ಹಾಗೂ Investigation report ನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಶಾನೆ ಆರ 8 ಮತ್ತು ನಿಶಾನೆ ಆರ 9 ಎಂದು ಗುರ್ತಿಸಲಾಯಿತು

<u>**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀಮತಿ ಪಿ ಆರ ಬಿ ರವರಿಂದ.**</u>

ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ವೃತ್ತಿ business ಎಂದು ತೋರಿಸಿದ್ದು ಯಾವ ರೀತಿಯ business ಎಂದರೆ ನಾನು Private Medical investigator ಎನ್ನುತ್ತಾರೆ. ನಾನು ರಿಪೋರ್ಟನ್ನು ನನ್ನ ಸ್ವಂತಕ್ಕೆ ತಯಾರು ಮಾಡಿ ಹಾಕಿರುತ್ತೇನೆಂದರೆ ಅದನ್ನು ನಾನು ಒಪ್ಪುವುದಿಲ್ಲ. ವಿವೇಕಾನಂದ ಆಸ್ಪತ್ರೆಯ ಬಿಲ್ ಗಳನ್ನು verify ಮಾಡಿದ್ದು ಈ ಸಂಬಂಧ ಆಸ್ಪತ್ರೆಗೆ ಹೋಗಿ ಅದನ್ನು verify ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಕಿದ್ದೀರಾ ಎಂದರೆ ಸಾಕ್ಷಿ ನಾನು ಕಂಪನಿಗೆ ಎಲ್ಲ ದಾಖಲೆಗಳನ್ನು ಕೊಟ್ಟಿದ್ದೇನೆ ಎನ್ನುತ್ತಾರೆ. ನೇರವಾಗಿ ಆಸ್ಪತ್ರೆಗೆ ಹೋಗಿ ನಾನು ಬಿಲ್ ಗಳನ್ನು verify ಮಾಡಲು ಬರುವುದಿಲ್ಲ ಅದಕ್ಕೆ ಸಂಬಂಧಿಸಿದಂತೆ ನಾನು ಲೇಟರ ಕೊಡಬೇಕೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಲೇಟರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಆಸ್ಪತ್ರೆಗೆ ಹೋಗಲು ನನಗೆ authorization letter ಕೊಟ್ಟಿರುತ್ತಾರೆ ಅದನ್ನು ನಾನು ಕಂಪನಿಗೆ



ಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ authorization letter ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಯಾವ ಕಾರಣಕ್ಕೆ ಹಾಜರುಪಡಿಸಿಲ್ಲವೆಂದರೆ ನಾನು ಯಾವುದೇ ಆಸ್ಪತ್ರೆಗೆ ಹೋಗಿಲ್ಲ ಕಂಪನಿಗೆ ಉಪಯೋಗವಾಗಲೆಂದು

ನಾನೇ ವರದಿ ತಯಾರಿಸಿ ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸಾಕ್ಷಿ ನಾನು ಆಸ್ಪತ್ರೆಗೆ ಹೋಗಿ ಅಲ್ಲಿ ಪ್ರತಿಯೊಂದು ಬಿಲ್ ಗಳನ್ನು verify ಮಾಡಿ ವರದಿ ಹಾಕಿರುತ್ತೇನೆ ಎನ್ನುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಮೇಡಿಷನ ಸಿಗಲಿಲ್ಲ ಎಂದಾದರೆ ಹೊರಗಡೆ ಕೂಡಾ ತಂದಿರುತ್ತಾರೆಂದರೆ ಸಾಕ್ಷಿ ಹೌದು, ಅವುಗಳ ಬಗ್ಗೆ ನೀವು verify ಮಾಡಿದ್ದೀರಾ ಎಂದರೆ ಸಾಕ್ಷಿ ಎಲ್ಲವನ್ನು ನನ್ನ ವರದಿಯಲ್ಲಿ ಹೇಳಿರುತ್ತೇನೆ ಎನ್ನುತ್ತಾರೆ. ಮೆಡಿಕಲ್ ಬಿಲ್ ಬೇರೆ ಕಡೆ ಔಷಧಿ ತೆಗೆದುಕೊಂಡ ಬಗ್ಗೆ ಇದ್ದರೆ ಅದನ್ನು ಆಸ್ಪತ್ರೆಯ ಬಿಲ್‌ನಲ್ಲಿ ಸೇರಿಸುವುದಿಲ್ಲವೆಂದರೆ ಸರಿ. ನನ್ನ Investigation report ನ್ನು ಕಂಪನಿಯವರು ಹೇಗೆ ಹೇಳಿರುತ್ತಾರೋ ಹಾಗೆ ನನ್ನ Investigation report ನಲ್ಲಿ ನಾನು ತಯಾರು ಮಾಡಿದ್ದೇನೆಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ಸದರಿ ಮೆಡಿಕಲ್ ಬಿಲ್ ಗಳನ್ನು verify ಮಾಡಿದ ಬಗ್ಗೆ ಆಸ್ಪತ್ರೆಯವರ ಕಡೆಯಿಂದ ಹಿಂಬರಹ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕಂಪನಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಾನು ಆ ರೀತಿ ಬಿಲ್ ಗಳನ್ನು verify ಮಾಡಿಲ್ಲ ಕೇವಲ ನಮ್ಮ ಕಂಪನಿಯವರು ಹೇಳಿದ ಹಾಗೆ ಸುಳ್ಳು ವರದಿ ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಆ ಕಾರಣಕ್ಕೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ